ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 19-03-1990.

# *ಹಾರುವ ಕಲೆಯ ಆಧಾರ ಉಲ್ಲಾಸ-ಉತ್ಸಾಹದ ರೆಕ್ಕೆಗಳು.*

(उड़ती कला का आधार उमंग-उत्साह के पंख)

*ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.*

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸರ್ವ ಮಕ್ಕಳ ಸ್ನೇಹ ಸಂಪನ್ನ ಮಿಲನದ ಭಾವನೆ ಮತ್ತು ಸಂಪೂರ್ಣರಾಗುವ ಶ್ರೇಷ್ಠ ಕಾಮನೆಯ ಶುಭ ಉಮ್ಮಂಗ -ಉತ್ಸಾಹದ ವೈಬ್ರೇಷನನ್ನು ಬಾಪ್‌ದಾದಾ ನೋಡುತ್ತಿದ್ದಾರೆ. ಪ್ರತಿಯೊಬ್ಬ ಮಗುವಿನಲ್ಲಿ ಅದರಲ್ಲಿಯೂ ಕಲ್ಪದಲ್ಲಿ ಮೊದಲಬಾರಿ ಮಿಲನ ಮಾಡುವ ಮಕ್ಕಳ ಉತ್ಸಾಹ ಮತ್ತು ಈ ಕಲ್ಪದಲ್ಲಿ ಅನೇಕ ಬಾರಿ ಮಿಲನ ಮಾಡುವಂತಹ ಮಕ್ಕಳ ಉತ್ಸಾಹವು ಬೇರೆ-ಬೇರೆಯಾಗಿದೆ. ಇದನ್ನೇ ತಾವು ತಮ್ಮ ಭಾಷೆಯಲ್ಲಿ ಹೊಸ ಮಕ್ಕಳು ಮತ್ತು ಹಳೆಯ ಮಕ್ಕಳು ಎಂದು ಹೇಳುತ್ತೀರಿ. ಆದರೆ ಎಲ್ಲರೂ ಅತೀ ಹಳಬರಿಗಿಂತ ಹಳಬರೇ ಆಗಿದ್ದಾರೆ ಏಕೆಂದರೆ ಹಳೆಯ ಪರಿಚಯ ತಂದೆಯ ಕಡೆ. ಬ್ರಾಹ್ಮಣ ಪರಿವಾರದ ಕಡೆ ಆಕರ್ಷಣೆಗೆ ಮಾಡಿ ಇಲ್ಲಿ ಕರೆತಂದಿದೆ. ಕೇವಲ ಗುರುತಿಸಲು ಮಾತ್ರ ಹೊಸಬರು ಮತ್ತು ಹಳಬರೆಂದು ಹೇಳಲಾಗುತ್ತದೆ. ಹೊಸ ಮಕ್ಕಳ ಉಮ್ಮಂಗ-ಉತ್ಸಾಹವೇನೆಂದರೆ- ಕಡಿಮೆ ಸಮಯದಲ್ಲಿಯೇ ಬಹಳ ಮುಂದೆ ಹಾರುತ್ತಾ ತಂದೆಯ ಸಮಾನರಾಗಿ ತೋರಿಸಬೇಕೆಂದು. ಮತ್ತು ಹಳೆಯ ಮಕ್ಕಳದು ಇದೇ ಶ್ರೇಷ್ಠ ಸಂಕಲ್ಪವಿದೆ- ಬಾಪ್ ದಾದಾರವರಿಂದ ಯಾವ ಪಾಲನೆ ಸಿಕ್ಕಿದೆಯೋ, ಖಜಾನೆ ಸಿಕ್ಕಿದೆಯೋ ಅದರ ಮರುಪಾವತಿಯನ್ನು ತಂದೆಯ ಮುಂದೆ ಸದಾ ಇಡುತ್ತಾ ಇರಬೇಕು. ಇಬ್ಬರ ಉಮ್ಮಂಗ- ಉತ್ಸಾಹವೂ ಶ್ರೇಷ್ಠವಾಗಿದೆ. ಇದೇ ಉಮ್ಮಂಗ-ಉತ್ಸಾಹವು ರೆಕ್ಕೆಗಳಾಗಿ ಹಾರುವ ಕಲೆಯ ಕಡೆ ಕರೆದುಕೊಂಡು ಹೋಗುತ್ತಿದೆ. ಹಾರುವಕಲೆಯ ರೆಕ್ಕೆಗಳು ಜ್ಞಾನ-ಯೋಗವಂತೂ ಇದ್ದೇ ಇದೆ. ಆದರೆ ಪ್ರತ್ಯಕ್ಷ ಸ್ವರೂಪದಲ್ಲಿ ಇಡೀ ದಿನಚರಿಯಲ್ಲಿ ಪ್ರತೀ ಸಮಯ. ಪ್ರತೀ ಕರ್ಮದಲ್ಲಿ, ಪ್ರತೀ ದಿನ, ಹೊಸ ಉಮ್ಮಂಗ-ಉತ್ಸಾಹವು ಸ್ವತಹ ಉತ್ಪನ್ನವಾಗುತ್ತದೆ. ಎಲ್ಲಿ ಉಮ್ಮಂಗ- ಉತ್ಸಾಹವಿರುವುದೋ ಅದೇ ಹಾರುವ ಕಲೆಯ ಆಧಾರವಾಗುತ್ತದೆ. ಎಂತಹದೇ ಕಾರ್ಯವಿರದೆ, ಸ್ವಚ್ಛ ಮಾಡುವುದಿರಲಿ, ಪಾತ್ರೆ ತೊಳೆಯುವುದಿರಲಿ, ಸಾಧಾರಣ ಕರ್ಮವೇ ಆಗಿರಲಿ ಆದರೆ ಅದರಲ್ಲಿಯೂ ಉಮ್ಮಂಗ-ಉತ್ಸಾಹವು ಸ್ವಾಭಾವಿಕ ಹಾಗೂ ನಿರಂತರವಾಗಿರುವುದು.  ಕೇವಲ ಅಭ್ಯಾಸ ಮಾಡುತ್ತಿರುವಾಗ ಓದುತ್ತಿರುವಾಗ ಸ್ಮೃತಿಯಲ್ಲಿ ಕುಳಿತುಕೊಳ್ಳಬೇಕಾದರೆ ಅಥವಾ ಇತರರಿಗೆ ಯೋಗ ಮಾಡಿಸಬೇಕಾದಾಗ ಅಥವಾ ಆಧ್ಯಾತ್ಮಿಕ

ಸೇವೆಯಲ್ಲಿ ನಿರತರಾಗಿದ್ದಾಗ.. ಆ ಸಮಯದಲ್ಲಿ ಕೇವಲ ಉಮ್ಮಂಗ-ಉತ್ಸಾಹವಿದ್ದು ಒಂದುವೇಳೆ ಸಾಧಾರಣ ಕರ್ಮವಾಗಿದ್ದರೆ ಸ್ಥಿತಿಯೂ ಸಾಧಾರಣ, ಉಮ್ಮಂಗ-ಉತ್ಸಾಹವೂ ಸಾಧಾರಣ ಆಗಿಬಿಡಬಾರದು. ಈ ರೀತಿಯಿದ್ದರೆ ಅದು ಹಾರುವ ಕಲೆಯ ಚಿಹ್ನೆಯಲ್ಲ. ಹಾರುವ ಕಲೆಯಿರುವ ಶ್ರೇಷ್ಠ ಅತ್ಮನ ಉಮ್ಮಂಗ-ಉತ್ಸಾಹದ ರೆಕ್ಕೆಗಳು ಸದಾ ಹಾರುತ್ತಾ ಇರುತ್ತವೆ ಅಂದಾಗ ಬಾಪ್‌ದಾದಾ ಎಲ್ಲಾ ಮಕ್ಕಳ ಉಮ್ಮಂಗ- ಉತ್ಸಾಹವನ್ನು ನೋಡುತ್ತಿದ್ದೇವೆ. ರೆಕ್ಕೆಗಳಂತೂ ಎಲ್ಲರಿಗೂ ಇವೆ ಆದರೆ ಕೆಲಕೆಲವು ಉಮ್ಮಂಗ-ಉತ್ಸಾಹದಲ್ಲಿ ಹಾರುತ್ತಾ-ಹಾರುತ್ತಾ ಸುಸ್ತಾಗಿಬಿಡುತ್ತಾರೆ. ಯಾವುದಾದರೂ ಚಿಕ್ಕಮ ಅಥವಾ ದೊಡ್ಡ ಕಾರಣವಾಗುತ್ತದೆ ಅರ್ಥಾತ್ ಅಡಚಣೆಯು ಬಂದಾಗ ಕೆಲವೊಮ್ಮೆ ಬಹಳ ಪ್ರೀತಿಯಿಂದ ಪಾರು ಮಾಡುತ್ತಾರೆ. ಇನ್ನೂ ಕೆಲವೊಮ್ಮೆ ಗಾಬರಿಯಾಗಿಬಿಡುತ್ತಾರೆ. ಅದಕ್ಕೆ ತಾವು ಕನ್‌ಫ್ಯೂಸ್ ಆಗುವುದು ಎಂದು ಹೇಳುತ್ತೀರಿ. ಈ ರೀತಿ ಕನ್‌ಫ್ಯೂಸ್ ಆಗಿ ಸಹಜವಾಗಿ ಪಾರು ಮಾಡದೆ ಇರುವ ಕಾರಣ ಸುಸ್ತಾಗಿಬಿಡುತ್ತಾರೆ ಆದರೆ ಸ್ವಲ್ಪ ಸ್ವಲ್ಪ ಸುಸ್ತಾಗುತ್ತಾರೆ ಆದರೂ ಲಕ್ಷ್ಯವು ಶ್ರೇಷ್ಠವಾಗಿದೆ. ಗುರಿಯು ಬಹಳ ಪ್ರಿಯವೆನಿಸುತ್ತದೆ ಆದ್ದರಿಂದ ಮತ್ತೆ ಹಾರಲು ತೊಡಗುತ್ತಾರೆ. ಶ್ರೇಷ್ಠ ಲಕ್ಷ್ಯ ಮತ್ತು ಪ್ರಿಯವಾದ ಗುರಿ ಹಾಗೂ ತಂದೆಯ ಪ್ರೀತಿಯ ಅನುಸಾರ - ಸುಸ್ತಿನಿಂದ ಕೆಳಗಿನ ಸ್ಥಿತಿಗೆ ಬಂದಿದ್ದರೂ ಸಹ ಅಲ್ಲಿಯೇ ನಿಲ್ಲಲು ಬಿಡುವುದಿಲ್ಲ ಆದ್ದರಿಂದ ಪುನಃ ಹಾರಲು ತೊಡಗುತ್ತಾರೆ. ಬಾಪ್ ದಾದಾ ಮಕ್ಕಳ ಈ ಆಟವನ್ನು ನೋಡುತ್ತಾ ಇರುತ್ತಾರೆ. ಆದರೂ ತಂದೆಯ ಪ್ರೀತಿಯು ಮಕ್ಕಳನ್ನು ಅಲ್ಲಿಯೇ ನಿಲ್ಲಲು ಬಿಡುವುದಿಲ್ಲ ಮತ್ತು ಪ್ರೀತಿಯಲ್ಲಿ ಮಕ್ಕಳು ಮಜಾರಿಟಿ ಪಾಸ್ ಆಗಿದ್ದಾರೆ ಆದ್ದರಿಂದ ಅಡಚಣೆಯು ಎಷ್ಟಾದರೂ ತಡೆಯುವ ಪ್ರಯತ್ನ ಮಾಡಲು ಮತ್ತು ಮಾಡುತ್ತದೆ. ಇದರಿಂದ ಕೆಲಕೆಲವೊಮ್ಮೆ ಇದು ಬಹಳ ಕಷ್ಟವಾಗಿದೆ. ಇದಕ್ಕಿಂತಲೂ ಹಳೆಯ ಜೀವನವೇ ಚೆನ್ನಾಗಿತ್ತು. ಅದೇರೀತಿ ಆಗಿಬಿಡೋಣವೆಂದು ಯೋಚಿಸುತ್ತಾರೆ. ಆದರೆ ಆ ರೀತಿ ಅಂದುಕೊಂಡರೂ ಸಹ ಹಿಂದಿನ ಜೀವನಕ್ಕೆ ಹೋಗುವ ಮಜಾ ಬರುವುದಿಲ್ಲ ಏಕೆಂದರೆ ಮೊದಲು ಈ ಪರಮಾತ್ಮನ ಪ್ರೀತಿ ಮತ್ತು ದೇಹಧಾರಿಗಳ ಪ್ರೀತಿ ಈ ಎರಡರ ಅಂತರವು ಸನ್ಮುಖದಲ್ಲಿ ಇರುವ ಕಾರಣ ಹಾರುತ್ತಾ ಹಾರುತ್ತಾ ಯಾವಾಗ ನಿಲ್ಲುವ ಕಲೆಯಲ್ಲಿ ಬಂದುಬಿಡುತ್ತಾರೆಯೋ ಆಗ ಎರಡು ದಾರಿಗಳ ಮಧ್ಯದಲ್ಲಿರುತ್ತಾರೆ ಮತ್ತು ಇತ್ತಕಡೆ ಹೋಗುವುದೋ ಅಥವಾ ಅತ್ತಕಡೆ ಹೋಗುವುದೋ ಎಲ್ಲಿ ಹೋಗುವುದು ಎಂದು ಆಲೋಚಿಸುತ್ತಾರೆ ಆದರೆ ಪರಮಾತ್ಮನ ಪ್ರೀತಿಯ ಅನುಭವವು ಗೊಂದಲಕ್ಕೆ ಒಳಗಾಗಿರುವವರನ್ನು ಮೂರ್ಚಿತರನ್ನಾಗಿ ಮಾಡಿಬಿಡುತ್ತದೆ ಮತ್ತು ಉಮ್ಮಂಗ-ಉತ್ಸಾಹದ ರೆಕ್ಕೆಗಳು ಸಿಕ್ಕಿಬಿಡುತ್ತವೆ ಆದ್ದರಿಂದ ಆಲೋಚಿಸುತ್ತಿದ್ದರೂ ಸಹ ಮತ್ತೆ ನಿಲ್ಲುವ ಕಲೆಯಿಂದ ಹಾರುವ ಕಲೆಯಲ್ಲಿ ಹಾರತೊಡಗುತ್ತಾರೆ. ಬಹಳ ಚಿಕ್ಕ-ಚಿಕ್ಕ ಮಾತುಗಳೇಮಆಗಿರುತ್ತವೆ ಆದರೆ ಆ ಸಮಯದಲ್ಲಿ ನಿರ್ಬಲರಾಗಿರುವ ಕಾರಣ ದೊಡ್ಡದೆನಿಸುತ್ತದೆ, ಹೇಗೆ ಶಾರೀರಿಕ ದೌರ್ಬಲ್ಯವುಳ್ಳವರು ಒಂದು ನೀರಿನ ಲೋಟವನ್ನು ಎತ್ತುವುದೂ ಸಹ ಕಷ್ಟವೆನಿಸುತ್ತದೆ ಮತ್ತು ಯಾರು ಶಕ್ತಿವಂತರಾಗಿರುವರೋ ಅವರು ಎರಡು ಬಕೇಟ್ ನೀರನ್ನು ಎತ್ತುವುದೂ ಸಹ ಆಟವೆಸುತ್ತದೆ. ಹಾಗೆಯೇ ಚಿಕ್ಕ ಮಾತು ದೊಡ್ಡದೆಂಬ ಅನುಭವ ಮಾಡತೊಡಗುತ್ತಾರೆ. ಆದರೂ ಉಮ್ಮಂಗ-ಉತ್ಸಾಹದ ರೆಕ್ಕೆಗಳು ಸದಾ ಹಾರಿಸುತ್ತಾ ಇರುತ್ತವೆ. ನಿತ್ಯವೂ ಅಮೃತವೇಳೆ ತಮ್ಮ ಮುಂದೆ ಇಡೀ ದಿನ ಯಾವ-ಯಾವ ಸ್ಮೃತಿಯಿಂದ ಉಮ್ಮಂಗ-ಉತ್ಸಾಹದಲ್ಲಿ ಇರಬೇಕು ಎಂದು ವೆರೈಟಿ ಉಮ್ಮಂಗ-ಉತ್ಸಾಹದ ಮಾತುಗಳನ್ನು ಸ್ಮೃತಿಗೆ ತಂದುಕೊಳ್ಳಿ. ಕೇವಲ ಒಂದೇ ಮಾತು ಅಂದರೆ ನಾನು ಜ್ಯೋತಿರ್ಬಿಂದು ಆಗಿದ್ದೇನೆ. ತಂದೆಯೂ ಜ್ಯೋತಿರ್ಬಿಂದು ಆಗಿದ್ದಾರೆ. ಮನೆಗೆ ಹೋಗಬೇಕಾಗಿದೆ ನಂತರ ರಾಜ್ಯದಲ್ಲಿ ಬರಬೇಕಾಗಿದೆ ಎಂಬ ಒಂದೇ ಮಾತು ಕೆಲಕೆಲವೊಮ್ಮೆ ಮಕ್ಕಳಿಗೆ ಬೋರ್ ಆಗತೊಡಗುತ್ತದೆ. ನಂತರ ಏನಾದರೂ ಹೊಸದು ಬೇಕೆಂದು ಆಲೋಚಿಸುತ್ತಾರೆ. ಆದರೆ ಪ್ರತೀ ದಿನದ ಮುರುಳಿಯಲ್ಲಿ ಉಮ್ಮಂಗ-ಉತ್ಸಾಹದ ಭಿನ್ನ-ಭಿನ್ನ ಅಂಶಗಳಿರುತ್ತವೆ, ಆ ಉಮ್ಮಂಗ-ಉತ್ಸಾಹದ ವಿಶೇಷ ಅಂಶಗಳನ್ನು ತಮ್ಮಬಳಿ ನೋಟ್ ಮಾಡಿಕೊಳ್ಳಿ. ಹೀಗೆ ಬಹಳದೊಡ್ಡ ಪಟ್ಟಿಯನ್ನೇ ತಯಾರಿಸಬಹುದು. ಡೈರಿಯಲ್ಲಿಯೂ ನೋಟ್ ಮಾಡಿಕೊಳ್ಳಿ. ಬುದ್ಧಿಯಲ್ಲಿಯೂ ನೋಟ್ ಮಾಡಿಕೊಳ್ಳಿ. ಬುದ್ಧಿಯಲ್ಲಿ ನೆನಪು ಬಾರದೇ ಇದ್ದಾಗ ಡೈರಿಯನ್ನು ನೋಡಿ ಸ್ಮೃತಿಗೆ ತಂದುಕೊಳ್ಳಿ ಮತ್ತು ವಿಭಿನ್ನ ಮಾತುಗಳು ಪ್ರತಿ ಸತ್ಯವೂ ಹೊಸ ಉಮ್ಮಂಗ-ಉತ್ಸಾಹವನ್ನು ಹೆಚ್ಚಿಸುತ್ತವೆ. ಮನುಷ್ಯಾತ್ಮನ ಸ್ವಭಾವವೇನೆಂದರೆ ಯಾವಾಗಲೂ ವಿಭಿನ್ನತೆಯು ಇಷ್ಟವಾಗುತ್ತದೆ ಆದ್ದರಿಂದ ಜ್ಞಾನದ ಅಂಶವನ್ನಾದರೂ ಮನನ ಮಾಡಿ ಅಥವಾ ವಾರ್ತಾಲಾಪ ಮಾಡಿ.

ಇಡೀ ದಿನ ಬಿಂದುವನ್ನು ನೆನಪು ಮಾಡುತ್ತೀರೆಂದರೆ ಬೋರ್ ಆಗಿಬಿಡುತ್ತದೆ ಆದರೆ ತಂದೆಯೂ ಬಿಂದುವಾಗಿದ್ದಾರೆ. ತಾವೂ ಬಿಂದುವಾಗಿದ್ದೀರಿ. ಸಂಗಮಯುಗದಲ್ಲಿ ಹೀರೋ ಪಾತ್ರಧಾರಿಗಳೂ ಆಗಿದ್ದೀರಿ. ಜೀರೋ(ಬಿಂದು)ನ ಜೊತೆ ಹೀರೋ ಸಹ ಆಗಿದ್ದೀರಿ, ಕೇವಲ ಜೀರೋ ಅಲ್ಲ. ಸಂಗಮಯುಗದ ಹೀರೋ ಆಗಿರುವ ಕಾರಣ ಇಡೀ ದಿನದಲ್ಲಿ ವಿಭಿನ್ನ ಪಾತ್ರವನ್ನು ಅಭಿನಯಿಸುತ್ತೀರಿ. ನಾನು ಜೀರೋವಿನದು ಇಡೀ ಕಲ್ಪದಲ್ಲಿ ಯಾವ-ಯಾವ ಪಾತ್ರವಿತ್ತು ಮತ್ತು ಈ ಸಮಯದಲ್ಲಿ ನನ್ನ ಹೀರೋ ಪಾತ್ರವೇನಾಗಿದೆ. ಯಾರ ಜೊತೆ ಪಾತ್ರವಿದೆ, ಎಷ್ಟು ಸಮಯ ಮತ್ತು ಯಾವ ಪಾತ್ರವನ್ನು ಅಭಿನಯಿಸಬೇಕಾಗಿದೆ. ಇದನ್ನು ವಿಭಿನ್ನ ರೂಪದಿಂದ ಜೀರೋ ಆಗಿ ತಮ್ಮ ಹೀರೋ ಪಾತ್ರದ ಸ್ಮೃತಿಯಲ್ಲಿರಿ. ನೆನಪಿನಲ್ಲಿಯೂ ಸಹ ವಿಭಿನ್ನ ರೂಪದಿಂದ ಬೀಜರೂಪ ಸ್ಥಿತಿಯಲ್ಲಿರಿ. ಕೆಲವೊಮ್ಮೆ ಫರಿಶ್ತಾ ರೂಪದಲ್ಲಿ. ಕೆಲವೊಮ್ಮೆ ವಾರ್ತಾಲಾಪದ ರೂಪದಲ್ಲಿದಿರಿ. ಇನ್ನೂ ಕೆಲವೊಮ್ಮೆ ತಂದೆಯಿಂದ ಸಿಕ್ಕಿರುವ ಖಜಾನೆಗಳ ಒಂದೊಂದು ರತ್ನವನ್ನು ಮುಂದೆ ತಂದುಕೊಳ್ಳಿ. ಯಾವ ಸಮಯದಲ್ಲಿ ಯಾವ ರುಚಿಯಿರುವುದೋ ಅದೇರೀತಿಯಿಂದ ನೆನಪು ಮಾಡಿರಿ. ಯಾವ ಸಮಯದಲ್ಲಿ ಯಾವ ಸಂಬಂಧದಿಂದ ತಂದೆಯ ಮಿಲನ, ತಂದೆಯ ಸ್ನೇಹವನ್ನು ಬಯಸುವಿರೋ ಆ ಸ್ನೇಹದಿಂದ ಮಿಲನ ಮಾಡಿರಿ ಆದ್ದರಿಂದ ಯಾವ ಸರ್ವಸಂಬಂಧದಿಂದ ತಂದೆಯು ತಮ್ಮನ್ನು ತನ್ನವರನ್ನಾಗಿ ಮಾಡಿಕೊಂಡರು ಮತ್ತು ತಾವೂ ಸಹ ತಂದೆಯನ್ನು ಸರ್ವಸಂಬಂಧದಿಂದ ತನ್ನವರನ್ನಾಗಿ ಮಾಡಿಕೊಂಡಿರಿ. ಕೇವಲ ಒಂದು ಸಂಬಂಧವಲ್ಲ. ಸರ್ವಸಂಬಂಧಗಳಿವೆಯಲ್ಲವೆ. ಆದರೆ ಒಂದು ಮಾತನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು- ತಂದೆ ಮತ್ತು ತಂದೆಯ ಪ್ರಾಪ್ತಿಗಳು ಹಾಗೂ ತಂದೆಯ ಖಜಾನೆಗಳ ವಿನಃ ಮತ್ತೇನೂ ನೆನಪಿಗೆ ಬರಬಾರದು. ಅನೇಕ ಪ್ರಾಪ್ತಿಗಳಿವೆ. ಅನೇಕ ಖಜಾನೆಗಳಿವೆ. ಅನೇಕ ಸಂಬಂಧ. ಅನೇಕ ಖುಷಿಯ ಮಾತಿದೆ. ಉಮ್ಮಂಗ-ಉತ್ಸಾಹದ ಮಾತುಗಳಿವೆ. ಅದನ್ನು ಅದೇ ವಿಧಿಯಿಂದ ಉಪಯೋಗಿಸಿ ತಂದೆ ಮತ್ತು ತಾವು. ಇದೇ ರಕ್ಷಣಾ ರೇಖೆಯಾಗಿದೆ. ಈ ಸ್ಮೃತಿಯ ರೇಖೆಯಿಂದ ಹೊರಬರಬೇಡಿ. ಈ ರೇಖೆಯೇ ಪರಮಾತ್ಮನ ಛತ್ರಛಾಯೆಯಾಗಿದೆ. ಎಲ್ಲಿಯವರೆಗೆ ಈ ಛತ್ರಛಾಯೆಯ ಗೆರೆಯ ಒಳಗಡೆ ಇರುತ್ತೀರೋ ಅಲ್ಲಿಯವರೆಗೆ ಯಾವುದೇ ಮಾಯೆಗೆ ಬರಲು ಧೈರ್ಯವಿಲ್ಲ ಆಗ ಪರಿಶ್ರಮವೆಂದರೇನು? ಅಡಚಣೆ ಎಂದರೆ ಹೇಗಿರುತ್ತದೆ? ವಿಘ್ನವೆಂದರೇನು? ಇವೆಲ್ಲಾ ಶಬ್ದಗಳಿಂದ ಅವಿದ್ಯೆಯಾಗಿಬಿಡುವುದು. ಹೇಗೆ ಆದಿಸ್ಥಾಪನೆಯ ಸಮಯದಲ್ಲಿ ಯಾವಾಗ ಸತ್ಯಯುಗದ ಆತ್ಮರು ಪ್ರವೇಶವಾಗುತ್ತಿದ್ದರೋ ಆಗ ಆ ಆತ್ಮರಿಗೆ ವಿಕಾರವೆಂದರೇನು, ದುಃಖವೆಂದರೇನು, ಮಾಯೆಯೆಂದರೇನು, ಈ ಶಬ್ದಗಳ ಅವಿದ್ಯೆ ಇರುತ್ತಿತ್ತು. ಮಕ್ಕಳಿಗೆ ಇದು ಅನುಭವ ಇದೆಯಲ್ಲವೆ! ಹಳಬರು ಈ ಮಾತುಗಳನ್ನು ತಿಳಿದುಕೊಂಡಿದ್ದೀರಿ. ಅದೇರೀತಿ ಯಾರು ತಂದೆ ಮತ್ತು ನಾನು ಎಂಬ ಸ್ಮೃತಿಯ ಗೆರೆಯ ಛತ್ರಛಾಯೆಯಲ್ಲಿ ಇರುವರೋ ಅವರಿಗೆ ಈ ಮಾತುಗಳು ಅವಿದ್ಯೆ ಆಗಿಬಿಡುತ್ತದೆ ಆದ್ದರಿಂದ ಸದಾ ಸುರಕ್ಷಿತರಾಗಿರುತ್ತಾರೆ. ಸದಾ ತಂದೆಯ ಹೃದಯದಲ್ಲಿ ಇರುತ್ತಾರೆ. ತಮ್ಮೆಲ್ಲರಿಗೆ ಹೃದಯವು ಬಹಳ ಇಷ್ಟವಾಗುತ್ತದೆಯಲ್ಲವೆ ಹೃದಯದ ಆಕಾರದಲ್ಲಿಯೇ ಉಡುಗೊರೆಯನ್ನು ಮಾಡಿ ತರುತ್ತೀರಿ. ಕೇಕ್ ಸಹ ಹೃದಯದ ಆಕಾರದಲ್ಲಿ ಮಾಡುತ್ತೀರಿ. ಬಾಕ್ಸ್‌ನ್ನೂ ಸಹ ಹೃದಯದಂತೆ ಮಾಡಿಸುತ್ತೀರಿ ಮತ್ತು ಇರುವುದೂ ಸಹ ಹೃದಯದಲ್ಲಿಯೇ ಅಲ್ಲವೆ. ತಂದೆಯ ಹೃದಯದದಲ್ಲಿ ಮಾಯೆಯು ಬರಲು ಸಾಧ್ಯವಿಲ್ಲ. ಹೇಗೆ ಕಾಡಿನಲ್ಲಿಯೂ ಬೆಳಕು ಮಾಡಿಬಿಟ್ಟರು. ಕಾಡಿನ ರಾಜನೆನಿಸಿರುವ ಸಿಂಹವೂ ಸಹ ಬರಲು ಸಾಧ್ಯವಿಲ್ಲ, ಓಡಿಹೋಗುತ್ತದೆ. ತಂದೆಯ ಹೃದಯವು ಎಷ್ಟು ಹಗುರ ಮತ್ತು ಶಕ್ತಿಯನ್ನು ಹೊಂದಿದೆ. ಅದರ ಮುಂದೆ ಮಾಯೆಯ ಯಾವುದೇ ರೂಪವು ಬರಲು ಸಾಧ್ಯವಿಲ್ಲ ಅಂದಮೇಲೆ ಪರಿಶ್ರಮದಿಂದ ಮುಕ್ತರಾಗಿಬಿಟ್ಟಿರಲ್ಲವೆ. ಜನ್ಮವೂ ಸಹ ಸಹಜವಾಯಿತು, ಜನ್ಮ ಪಡೆಯುವುದರಲ್ಲಿ ಪರಿಶ್ರಮವೆನಿಸಿತೆ? ತಂದೆಯ ಪರಿಚಯ ಸಿಕ್ಕಿತು. ತಂದೆಯನ್ನು ಅರಿತುಕೊಂಡಿರಿ ಮತ್ತು ಸೆಕೆಂಡಿನಲ್ಲಿ ಅನುಭವ ಮಾಡಿದಿರಿ- ತಂದೆಯು ನನ್ನವರು ಮತ್ತು ನಾನು ತಂದೆಯವನು. ಜನ್ಮವೂ ಸಹಜವಾಯಿತು, ಅಲೆಯಬೇಕಾಗಲಿಲ್ಲ. ತಮ್ಮ ದೇಶವೆಂಬ ಮನೆಗೆ ತಂದೆಯೇ ಮಕ್ಕಳನ್ನು ನಿಮಿತ್ತರನ್ನಾಗಿ ಮಾಡಿ ಕಳುಹಿಸಿದರು. ಹುಡುಕುವುದಾಗಲಿ, ಅಲೆದಾಡುವುದಾಗಲಿ ಮಾಡಲಿಲ್ಲ. ಮನೆಯಲ್ಲಿ ಕುಳಿತಿದ್ದಂತೆಯೇ ತಂದೆಯು ಕಳಿಸಿದರಲ್ಲವೆ. ಈಗಂತೂ ಪ್ರೀತಿಯಿಂದ ಮಿಲನ ಮಾಡಲು ಭಾರತಕ್ಕೆ ಪರಿಚಯವಂತೂ ಅಲ್ಲಿಯೇ ಸಿಕ್ಕಿತು. ಜನ್ಮವೂ ಅಲ್ಲಿಯೇ ಸಿಕ್ಕಿತಲ್ಲವೆ. ಜನ್ಮವು ಮತ್ತು ಪಾಲನೆಯು ಅತಿ ಸಹಜವಾಗಿದೆ. ಕೇವಲ ಅನುಭವ ಮಾಡಿರಿ ಮತ್ತು ಸಹಜವಾಗಿಯೇ ಪಾಲನೆ ಪಡೆದಿರಿ. ತಂದೆಯ ಜೊತೆಜೊತೆಯಲ್ಲಿಯೇ

ಹೋಗಬೇಕಲ್ಲವೇ ಅಥವಾ ಮಧ್ಯದಲ್ಲಿ ಧರ್ಮರಾಜಪುರಿಯಲ್ಲಿ ನಿಲ್ಲುವಿರಾ? ಎಲ್ಲರಿಗೂ ಈ ಧೃಡಸಂಕವಿದೆಯೇ? ಜೊತೆಯಿರುತ್ತೇವೆ ಮತ್ತು ಜೊತೆಯಲ್ಲಿ ನಡೆಯುತ್ತೇವೆ ಮತ್ತು ಭವಿಷ್ಯದಲ್ಲಿಯೂ ಬ್ರಹ್ಮಾತಂದೆಯ ಜೊತೆ ರಾಜ್ಯದಲ್ಲಿ ಹಾಗೂ ಪಾತ್ರದಲ್ಲಿ ಬರುತ್ತೇವೆ- ಪಕ್ಕಾ ಸಂಕಲ್ಪವಿದೆಯಲ್ಲವೆ. ನಡೆಯುತ್ತಾ ನಡೆಯುತ್ತಾ ಸುಸ್ತಾಗಿಬಿಟ್ಟರೆ ನಿಂತುಬಿಡುತ್ತೇವೆ ನಂತರ ಏನು ಮಾಡುತ್ತೀರಿ? ಏಕೆಂದರೆ ತಂದೆಯಂತೂ ಆ ಸಮಯದಲ್ಲಿ ನಿಲ್ಲುವುದಿಲ್ಲ. ಈಗ ನಿಂತಿದ್ದಾರೆ. ಈಗಿನ್ನೂ ಸಮಯ ಕೊಟ್ಟಿದ್ದಾರೆ. ಆದರೆ ಆ ಸಮಯದಲ್ಲಿ ತಂದೆಯು ನಿಲ್ಲುವುದಿಲ್ಲ. ಆ ಸಮಯದಲ್ಲಂತೂ ಸೆಕೆಂಡಿನಲ್ಲಿ ಹಾರುತ್ತಾರೆ. ಈಗಿನ್ನೂ ಹೊಸ-ಹೊಸ ಮಕ್ಕಳಿಗಾಗಿ ನಿಧಾನವಾಗಿದೆ ಆದರೆ ಟೂಲೇಟ್‌ನ ಬೋರ್ಡನ್ನು ಹಾಕಿಲ್ಲ. ಈಗಂತೂ ಹೊಸ ಪ್ರಪಂಚವು ಬರುವುದಕ್ಕಾಗಿ ಹೊಸ-ಹೊಸ ಮಕ್ಕಳಿಗಾಗಿ ನಿಲ್ಲಲಾಗಿದೆ- ಇವರೂ ಸಹ ಲಾಸ್ಟ್ ಸೋ ಫಾಸ್ಟ್ ಮತ್ತು ಫಸ್ಟ್ ನಂಬರಿನವರೆಗೆ ತಲುಪಲಿ ಎಂದು. ಎಲ್ಲರೂ ಜೊತೆಯಲ್ಲಿ ಹೋಗುವುದಕ್ಕಾಗಿ ತಯಾರಾಗಿದ್ದೀರಲ್ಲವೆ. ಯಾರು ಈ ಕಲ್ಪದಲ್ಲಿ ಮೊದಲಬಾರಿ ಬಂದಿದ್ದಾರೆಯೋ ಅವರಿಗೆ ಬಾಪ್‌ದಾದಾ ಶುಭಾಷಯಗಳನ್ನು ತಿಳಿಸುತ್ತೇವೆ. ಚಿಕ್ಕಚಿಕ್ಕ ಮಕ್ಕಳ ಮೇಲೆ ದೊಡ್ಡವರ ಪ್ರೀತಿಯಿರುತ್ತದೆ ಅಂದಮೇಲೆ ತಂದೆ ಮತ್ತು ಹಿರಿಯ ಸಹೋದರ-ಸಹೋದರಿಯರಿಗೆ ತಮ್ಮೆಲ್ಲರ ಪ್ರತಿ ವಿಶೇಷ ಪ್ರೀತಿಯಿದೆ. ತಾವು ಮುದ್ದು ಮಕ್ಕಳಾಗಿದ್ದೀರಲ್ಲವೆ. ಹೊಸ ಮಕ್ಕಳಾಗಿದ್ದೀರಿ. ಹೊಸಬರಿರಲಿ, ಹಳಬರಿರಲಿ ಎಲ್ಲರೂ ತೀವ್ರಗತಿಯಲ್ಲಿ ಮೊಟ್ಟಮೊದಲು ಬರಬೇಕಾಗಿದೆ. ಛತ್ರಛಾಯೆಯಲ್ಲಿ ಇರುವುದು, ಸದಾ ಹೃದಯದಲ್ಲಿರುವುದು - ಇದೇ ಎಲ್ಲದಕ್ಕಿಂತ ಸಹಜ ಅತಿಸಹಜವಾದ ತೀವ್ರಗತಿಯಾಗಿದೆ.

ತಮಗೆ ತಾವು ಎಂದೂ ಬೋರ್ ಆಗಬೇಡಿ, ಸದಾ ತನಗಾಗಿ ವಿಭಿನ್ನ ರೂಪದಿಂದ ಉಮ್ಮಂಗ-ಉತ್ಸಾಹವನ್ನು ಇಮರ್ಜ್ ಮಾಡಿಕೊಳ್ಳಿ. ಡಬಲ್ ವಿದೇಶಿಯರು ಕೆಲವರು ಕೆಲಕೆಲವೊಮ್ಮೆ ಇದನ್ನೂ ಯೋಚಿಸುತ್ತಾರೆ- ನಮ್ಮ ಸಂಸ್ಕೃತಿ ಮತ್ತು ಭಾರತದ ಸಂಸ್ಕೃತಿಯಲ್ಲಿ ಬಹಳ ಅಂತರವಿದೆ. ಭಾರತದ ಸಂಸ್ಕೃತಿ ಕೆಲವೊಮ್ಮೆ ಇಷ್ಟವಾಗುತ್ತದೆ. ಕೆಲವೊಮ್ಮೆ ಆಗುವುದಿಲ್ಲ ಆದರೆ ಇದಂತೂ ಭಾರತದ ಸಂಸ್ಕೃತಿಯೂ ಇಲ್ಲ, ವಿದೇಶದ ಸಂಸ್ಕೃತಿಯೂ ಅಲ್ಲ. ಇದು ಬ್ರಾಹ್ಮಣ ಸಂಸ್ಕೃತಿಯಾಗಿದೆ. ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿ ಈ ಹೆಸರಂತೂ ಎಲ್ಲರಿಗೂ ಇಷ್ಟವಿದೆಯಲ್ಲವೆ? ಬ್ರಹ್ಮಾತಂದೆಯೊಂದಿಗೂ ಬಹಳ ಪ್ರೀತಿಯಿದೆ ಮತ್ತು ಬಿ.ಕೆ. ಜೀವನವು ಅತಿಪ್ರಿಯವಾಗಿದೆ. ಕೆಲಕೆಲವೊಮ್ಮೆ ಶ್ವೇತವಸ್ತ್ರಗಳ ಬದಲು ಬಣ್ಣದ ವಸ್ತ್ರಗಳು ನೆನಪಿಗೆ ಬರುತ್ತದೆ ಏಕೆಂದರೆ ಬಿಳಿವಸ್ತ್ರಗಳು ಬೇಗನೆ ಮೈಲಿಗೆಯಾಗುತ್ತವೆ. ಅಂಗಡಿಗೆ ಹೋಗುತ್ತೀರಿ ಅಥವಾ ಎಲ್ಲಿಯಾದರೂ ಅಂತಹ ಸ್ಥಾನಗಳಿಗೆ ಹೋಗುವಾಗ ತಾವು ಯಾವುದೇ ವಸ್ತ್ರಗಳನ್ನು ಧರಿಸಿರಿ ಅದಕ್ಕಾಗಿ ಬಾಪ್‌ದಾದಾ ನಿರಾಕರಿಸುವುದಿಲ್ಲ. ಆದರೂ ನಮ್ಮದು ವಿದೇಶ ಸಂಸ್ಕೃತಿಯಾಗಿದೆ ಎಂಬ ವೃತ್ತಿಯಿಂದ ಧರಿಸಬೇಡಿ. ಇದೇ ನಮ್ಮ ವ್ಯಕ್ತಿತ್ವವಾಗಿದೆ ಎಂಬ ರೀತಿಯಿಂದ ಧರಿಸಬೇಡಿ, ಸೇವಾಭಾವದಿಂದ ಭಲೆ ಧರಿಸಿರಿ. ವ್ಯಕ್ತಿತ್ವದ ಲಕ್ಷ್ಯದಿಂದಲ್ಲ. ಬ್ರಾಹ್ಮಣ ಜೀವನದ ಲಕ್ಷ್ಯವಿರಲಿ, ಸೇವಾರ್ಥ ಅವಶ್ಯಕತೆಗೆ ಅನುಗುಣವಾಗಿ ಧರಿಸಿದಾಗ ಅದಕ್ಕಾಗಿ ನಿರಾಕರಿಸುವುದಿಲ್ಲ ಆದರೆ ಅದನ್ನೂ ಸಹ ನಿಮಿತ್ತರಾಗಿರುವ ಆತ್ಮರಿಂದ ಅನುಮತಿ ತೆಡೆದುಕೊಳ್ಳಿ. ಬಾಪ್ ದಾದಾರವರಂತೂ ಅನುಮತಿ ಕೊಟ್ಟುಬಿಟ್ಟರು. ತಾವೇಕೆ ನಿರಾಕರಿಸುತ್ತೀರಿ? ಎಂದು ಹೇಳುವಂತಿಲ್ಲ. ಕೆಲಕೆಲವೊಮ್ಮೆ ಬಹಳ ಹಾಸ್ಯದ ಮಾತುಗಳನ್ನು ಆಡುತ್ತಾರೆ. ಬೇಕಾಗುವ ಶಬ್ಧಗಳನ್ನು ನೆನಪಿಟ್ಟುಕೊಳ್ಳುತ್ತಾರೆ ಆದರೆ ಅದರ ಹಿಂದೆ ಯಾವ ಕಾಯಿದೆಯ ಮಾತುಗಳಿರುತ್ತವೆಯೋ ಅವನ್ನು ಮರೆತುಹೋಗುತ್ತಾರೆ, ಬುದ್ಧವಂತಿಕೆಯು ಬಾಪ್‌ದಾದಾರವರಿಗೆ ಇಷ್ಟವಾಗುತ್ತದೆ ಆದರೆ ಬುದ್ಧಿವಂತಿಕೆಯು ಮಿತವಾಗಿರಲಿ. ಪರಿಮಿತಿಯನ್ನು ಮೀರಿಹೋಗಬಾರದು. ತಿನ್ನಿರಿ, ಕುಡಿಯಿರಿ, ಧರಿಸಿರಿ. ಆಟವಾಡಿರಿ ಆದರೆ ಮಿತಿಯಿರಲಿ ಅಂದಾಗ ಯಾವ ಸಂಸ್ಕೃತಿಯು ಇಷ್ಟವಾಗಿದೆ? ಯಾವುದು ಬ್ರಹ್ಮಾತಂದೆಯ ಸಂಸ್ಕೃತಿಯೋ ಬ್ರಹ್ಮಾಕುಮಾರ-ಕುಮಾರಿಯರ ಸಂಸ್ಕೃತಿಯಾಗಿದೆ. ಇಷ್ಟವಿದೆಯಲ್ಲವೇ? ಇವರಲ್ಲಿ ಒಂದುಮಾತು ಬಹಳ ಚೆನ್ನಾಗಿದೆ, ಅದೇನೆಂದರೆ ಸ್ವಚ್ಛಹೃದಯದಿಂದ ಹೇಳಿಬಿಡುತ್ತಾರೆ. ಆದರೆ ಎಲ್ಲರೂ ಒಂದೇ ರೀತಿ ಇಲ್ಲ. ಕೆಲಕೆಲವರು ತಮ್ಮ ನಿರ್ಬಲತೆಯನ್ನು ವರ್ಣನೆ ಮಾಡುತ್ತಾರೆ. ಪದೇಪದೇ ನಾನು ನಿರ್ಬಲನಾಗಿದ್ದೇನೆ ಎಂಬುದನ್ನೇ ಸ್ಮೃತಿಯಲ್ಲಿ ತರುತ್ತಾ ಇರುತ್ತಾರೆ. ಇಷ್ಟೂ ನಾಜೂಕು ಆಗಬೇಡಿರಿ, ವಿಶೇಷತೆಗಳನ್ನು ಮರೆತುಹೋಗುತ್ತೀರಿ ಬಲಹೀನತೆಗಳನ್ನೇ ಯೋಚಿಸುತ್ತಾ ಇರುತ್ತೀರಿ ಆದರೆ ಉತ್ತರವು ಸಿಗಲಿಲ್ಲವೆಂದು ಆಲೋಚಿಸುತ್ತೀರಿ. ಬಾಪ್‌ದಾದಾ ಇಂತಹ

ಉತ್ತರವನ್ನು ಕೊಡುವುದಿಲ್ಲ. ಯಾವ ಕೊರತೆಯನ್ನು ತಾವು ಕೊಟ್ಟುಬಿಟ್ಟಿದ್ದೀರೋ ಅದಕ್ಕೆ ಬದಲಾಗಿ ಬಾಪ್‌ದಾದಾ ತಮಗೆ ಶಕ್ತಿ, ಖುಷಿ, ಉಮ್ಮಂಗ-ಉತ್ಸಾಹವನ್ನು ತುಂಬುತ್ತಾರೆ. ಅಂದಾಗ ಯಾವುದನ್ನು ಬಾಪ್‌ದಾದಾ ಕೊಡುತ್ತಾರೆಯೋ ಅದನ್ನು ನೀವು ತೆಗೆದುಕೊಳ್ಳುವುದಿಲ್ಲ. ನಂತರ ಉತ್ತರವೇ ಸಿಗಲಿಲ್ಲವೆಂದು ಆಲೋಚಿಸುತ್ತೀರಿ. ಯಾವುದನ್ನು ತಂದೆಯು ಕೊಡುತ್ತಾರೆಯೋ ಅದನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡಿರಿ. ಉತ್ತರಕ್ಕಾಗಿ ಕಾಯಬೇಡಿ. ಶಕ್ತಿ, ಖುಷಿಯನ್ನು ತೆಗೆದುಕೊಳ್ಳುತ್ತಾ ಹೋಗಿ ನಂತರ ನೋಡಿ, ಎಷ್ಟು ಒಳ್ಳೆಯ ಉಮ್ಮಂಗ-ಉತ್ಸಾಹವಿರುತ್ತದೆ! ಯಾವ ಘಳಿಗೆ ತಮ್ಮ ನಿರ್ಬಲತೆಯನ್ನು ಬರೆಯುತ್ತೀರಿ ಅಥವಾ ನಿಮಿತ್ತರಾಗಿರುವ ಆತ್ಮರಿಗೆ ತಿಳಿಸುತ್ತೀರೋ ಆಗ ಕೊಟ್ಟುಬಿಟ್ಟರಿ ಎಂದರೆ ಸಮಾಪ್ತಿಯಾಯಿತು. ಈಗೇನು ಸಿಗುತ್ತಿದೆ ಎಂಬುದು ಆಲೋಚಿಸಿ, ಬಾಪ್‌ದಾದಾರವರ ಬಳಿ ಒಬ್ಬೊಬ್ಬರದು ಎಷ್ಟೊಂದು ಪತ್ರಗಳು ಬರುತ್ತವೆ. ಬಾಪ್‌ದಾದಾ ಉತ್ತರ ಕೊಡುವುದಿಲ್ಲ ಆದರೆ ಯಾವುದು ಅವಶ್ಯಕತೆಯಿದೆಯೋ, ಯಾವ ಕೊರತೆಯಿದೆಯೋ ಅದನ್ನು ತುಂಬಿಸುವ ರಿಟರ್ನ್ ಕೊಡುತ್ತಾರೆ. ಬಾಕಿ ನೆನಪು-ಪ್ರೀತಿಯನ್ನಂತೂ ಪ್ರತಿನಿತ್ಯವೂ ಕೊಡುತ್ತಾರೆ. ನೆನಪು-ಪ್ರೀತಿಯು ಸಿಗದೇ ಇರುವಂತಹ ಯಾವುದಾದರೂ ದಿನವಿದೆಯೆ? ಬಾಪ್‌ದಾದಾ ಎಲ್ಲರಿಗೆ ಪ್ರತಿದಿನವೂ 2-3 ಪುಟಗಳ ಪತ್ರವನ್ನು ಬರೆಯುತ್ತಾರೆ. (ಮುರಳಿ) ಇಷ್ಟು ದೊಡ್ಡ ಪತ್ರವನ್ನು ಪ್ರತಿನಿತ್ಯವೂ ಯಾರು ಯಾರಿಗಾದರೂ. ಯಾರು ಯಾರಿಗೂ ಬರೆಯುವುದಿಲ್ಲ. ಎಷ್ಟಾದರೂ ಪ್ರೀತಿಯಿರಬಹುದು, ಯಾರಾದರೂ ಇಷ್ಟು ದೊಡ್ಡ ಪತ್ರವನ್ನು ಬರೆಯುವರೇ? ಮುರಳಿಯು ಪತ್ರವಾಗಿದೆಯಲ್ಲವೆ. ತಮ್ಮ ಮಾತುಗಳಿಗೆ ಪ್ರತ್ಯುತ್ತರ ಇರುತ್ತದೆಯಲ್ಲವೆ ಅಂದಮೇಲೆ ಇಷ್ಟು ದೊಡ್ಡ ಪತ್ರವನ್ನು ಬರೆಯುತ್ತಿದ್ದರೂ ಮಾತನಾಡುತ್ತಿದ್ದರೂ ಸಹ ತಾವು ಯಾವ ವಿಶೇಷ ಪತ್ರವನ್ನು ಬರೆಯುತ್ತೀರೋ ಅದಕ್ಕೆ ವಿಶೇಷ ಪ್ರತ್ಯುತ್ತರವನ್ನೂ ತಿಳಿಸುತ್ತೇವೆ. ಏಕೆಂದರೆ ಮುದ್ದು ಮಕ್ಕಳು ಅಗಲಿಹೋಗಿ ಮರಳಿ ಸಿಕ್ಕಿದ್ದೀರಿ. ಬಾಪ್‌ದಾದಾ ಅದಕ್ಕೆ ಪ್ರತಿಯಾಗಿ ಹೆಚ್ಚು ಶಕ್ತಿ ಮತ್ತು ಖುಷಿಯನ್ನು ಕೊಡುತ್ತಾರೆ. ಕೇವಲ ಬುದ್ಧಿಯನ್ನು ಸದಾ ಜಾಗೃತ ಮತ್ತು ಸ್ವಚ್ಛವಾಗಿಟ್ಟುಕೊಳ್ಳಿ. ಮೊದಲೂ ಸಹ ತಿಳಿಸಿದ್ದೆವು. ಆ ಮಾತನ್ನು ತಮ್ಮ ಬುದ್ಧಿಯಿಂದ ತೆಗೆದುಹಾಕಿರಿ. ಆ ಮಾತುಗಳನ್ನು ಇಟ್ಟುಕೊಂಡಿದ್ದರೆ ಬುದ್ಧಿಯು ಸ್ವಚ್ಛವಾಗಿರುವುದಿಲ್ಲ ಆದ್ದರಿಂದ ತಂದೆಯು ಏನನ್ನು ಕೊಡುತ್ತಾರೆಯೋ ಅದು ಬೆರಕೆಯಾಗಿಬಿಡುತ್ತದೆ. ಕೆಲವೊಮ್ಮೆ ಬೆರಕೆ ಮಾಡಿಬಿಡುತ್ತೀರಿ. ಕೆಲವೊಮ್ಮೆ ಅದನ್ನು ತಪ್ಪಿಸಿಬಿಡುತ್ತೀರಿ.

ಕೆಲಕೆಲವೊಮ್ಮೆ ಕೆಲವು ಮಕ್ಕಳು ಏನು ಮಾಡುತ್ತಾರೆ.. ಇಂದು ಸ್ಥಿತಿಗತಿಯನ್ನು ತಿಳಿಸುತ್ತೇವೆ. ಕೆಲವರು ಈ ರೀತಿ ಆಲೋಚಿಸುತ್ತಾರೆ- ಸೇವೆಯನ್ನಂತೂ ಮಾಡುತ್ತಿದ್ದೇವೆ ಆದರೆ ನಾನು ಸದಾ ಸಹಯೋಗಿಯಾಗಿದ್ದೇನೆ ಎಂದು ತಂದೆಯ ಯಾವ ಪ್ರತಿಜ್ಞೆಯಿದೆಯೋ ಅದರಂತೆ ತಂದೆಯು ಈ ಸೇವೆಯಲ್ಲಂತೂ ಸಹಯೋಗ ನೀಡಲಿಲ್ಲ. ಸಫಲತೆ ಕಡಿಮೆಯಾಯಿತು. ಬಾಪ್‌ದಾದಾ ಏಕೆ ಸಹಯೋಗ ನೀಡಲಿಲ್ಲ. ನಂತರ ಯೋಚಿಸುತ್ತಾರೆ- ಭಹುಷಃ ನಾನು ಯೋಗ್ಯನಾಗಿಲ್ಲ. ನನ್ನಿಂದ ಸೇವೆ ಮಾಡಲು ಆಗುತ್ತಿಲ್ಲ. ನಾನು ನಿರ್ಬಲನಾಗಿದ್ದೇನೆ ಎಂದು ವ್ಯರ್ಥವನ್ನು ಆಲೋಚಿಸುತ್ತಾರೆ ಆದರೆ ಒಂದುವೇಳೆ ಯಾವುದೇ ಮಗು ಸೇವೆಯ ಸಹಯೋಗಕ್ಕಾಗಿ ತಂದೆಯ ಮುಂದೆ ಸಂಕಲ್ಪ ಮಾಡಿದರೂ ಸಹ ತೆರೆದ ಹೃದಯದಿಂದ ಸಂಕಲ್ಪ ಮಾಡಿರಿ ಆದರೆ ಇದಕ್ಕೆ ಬದಲಾಗಿ ಬಾಪ್‌ದಾದಾ ಸೇವೆಯ ಸಮಯದಲ್ಲಿ ವಿಶೇಷ ಸಹಯೋಗ ನೀಡುತ್ತಾರೆ. ಕೇವಲ ಒಂದು ವಿಧಿಯನ್ನು ಅಳವಡಿಸಿಕೊಳ್ಳರಿ. ಎಂತಹದೇ ಪರಿಶ್ರಮದ ಸೇವೆಯಾಗಿರಲಿ! ಆದರೆ ತಂದೆಗೆ ಸೇವೆಯನ್ನೂ ಸಹ ಬುದ್ಧಿಯಿಂದ ಅರ್ಪಣೆ ಮಾಡಿಬಿಡಿ. ನಾನು ಮಾಡಿದೆನು, ಸಫಲತೆಯಾಗಲಿಲ್ಲ- ಈ 'ನಾನು' ಎಲ್ಲಿಂದ ಬಂದಿತು? ಮಾಡಿ- ಮಾಡಿಸುವಂತಹ ತಂದೆಯ ಜವಾಬ್ದಾರಿಯನ್ನು ಮರೆತು ತಮ್ಮ ಮೇಲೆ ಏಕೆ ಹೊತ್ತುಕೊಂಡಿರಿ? ಇದೇ ತಪ್ಪಾಗಿಬಿಡುತ್ತದೆ. ತಂದೆಯ ಸೇವೆಯಾಗಿದೆ. ತಂದೆಯು ಅವಶ್ಯವಾಗಿ ಮಾಡುವರು. ತಂದೆಯನ್ನು ಮುಂದಿಟ್ಟುಕೊಳ್ಳಿ. ತಮ್ಮನ್ನು ಮುಂದಿಟ್ಟುಕೊಳ್ಳಬೇಡಿ. ಇದನ್ನು ನಾನು ಮಾಡಿದೆನು. ಈ 'ನಾನು' ಶಬ್ದವು ಸಫಲತೆಯನ್ನು ದೂರಮಾಡುತ್ತದೆ. ತಿಳಿಯಿತೇ. ಮಕ್ಕಳು ಕೊಡುವ ಉತ್ತರಗಳು ಮತ್ತು ಆತ್ಮಿಕ ಸಂಭಾಷಣೆ ಎರಡು ವಿಧವಾಗಿ ಇವೆ. 1.ಬಲಹೀನತೆಗಳ ಉತ್ತರಗಳು ಅಥವಾ ಆತ್ಮಿಕ ಸಂಭಾಷಣೆ, 2. ಸೇವೆಯಲ್ಲಿ ಸಫಲತೆಯ ಬಗ್ಗೆ ಉತ್ತರಗಳು ಅಥವಾ ಆತ್ಮಿಕ ಸಂಭಾಷಣೆ. ಮಾಡುವ ನೀವು ನಿಮಿತ್ತರು. ನಾನು ಯೋಗ್ಯನಲ್ಲವೇನು ಎಂಬ ಸಂಕಲ್ಪ ಏಕೆ ಮಾಡುತ್ತಿರುವಿರಿ? ಇದು ಬಲಹೀನ ಸಂಕಲ್ಪ. ಹಾಕುವ ಬೀಜವನ್ನೇ ಬಲಹೀನವಾಗಿ ಹಾಕುತ್ತಿರುವಿರಿ ಮತ್ತೆ ಒಳ್ಳೆಯ ಫಲವೇಕೆ ಬರಲಿಲ್ಲ ಎಂದು ಯೋಚಿಸುತ್ತಿದ್ದೀರಿ. ಬೀಜ

ಬಲಹೀನವಾದಾಗ ಶಕ್ತಿಶಾಲಿ ಫಲ ಬರುತ್ತದೆಯೇ? ಬುನಾದಿಯನ್ನು ಬಲಹೀನವಾಗಿ ಹಾಕುತ್ತಿದ್ದೀರಿ ಬಾಪ್ ದಾದ ಮತ್ತು ಬ್ರಾಹ್ಮಣ ಪರಿವಾರ, ಡ್ರಾಮಾ, ಸಂಗಮಯುಗೀ ಸಮಯ ಎಲ್ಲವೂ ನಿಮ್ಮ ಸಫಲತೆಗೆ ಸಹಾಯಕಾರಿಗಳು. ನೀವು ನಾಲ್ಕು ಕಡೆಯಿಂದ ಶಕ್ತಿವಂತರು, ಬಾಪ್‌ದಾದಾ, ಬ್ರಾಹ್ಮಣ ಪರಿವಾರ, ಸಮಯ ಮತ್ತು ಸ್ವಯಂ ಹೀಗೆ ನಾಲ್ಕು ಕಡೆ ಶಕ್ತಿಶಾಲಿಯಾಗಿದ್ದು ಏಕೆ ಅಲುಗಾಡುತ್ತಿದ್ದೀರಿ? ಅರ್ಥವಾಯಿತೇ, ಉತ್ತರಗಳು ತಪ್ಪಾಗಿ ಬರೆಯುತ್ತಿಲ್ಲ ಬಾಪ್‌ದಾದಾರವರಿಗೆ ಪ್ರಿಯವಾಗಿರುವವರು, ಪ್ರತಿಯೊಬ್ಬ ಮಗುವಿನ ಜವಾಬ್ದಾರಿ ಬಾಪ್‌ದಾದಾ ಸದಾ ಕಾಲಕ್ಕಾಗಿ ತೆಗೆದುಕೊಂಡಿದ್ದಾರೆ. ತಪ್ಪಿಯೂ ನೀವು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಡಿ, ಸಫಲತೆ ನಿಮ್ಮ ಚರಣಗಳ ಹತ್ತಿರ ಹೇಗೆ ಇರುತ್ತದೆ ಎಂದು ಆಗ ನೋಡಿ. ಸಫಲತೆಯ ಸ್ವಯಂ ನಿಮಗೆ ಕಂಠಹಾರವಾಗಿ ಬಿಡುತ್ತದೆ. ನಿಮ್ಮ ಪಾದಗಳನ್ನು ಮುಟ್ಟುತ್ತದೆ ಬ್ರಾಹ್ಮಣರ ಹತ್ತಿರವಲ್ಲದೇ ಸಫಲತೆ ಇನ್ನೆಲ್ಲಿಗೂ ಹೋಗಲಾಗುವುದಿಲ್ಲ. ಇದು ಸಂಗಮಯುಗೀ ವರದಾನ. ತಂದೆಯ ಜವಾಬ್ದಾರಿಯನ್ನು ನೀವು ವಹಿಸಿಕೊಳ್ಳಬೇಡಿರಿ ಸಾಕು, ಅಷ್ಟೇ ಅರ್ಥವಾಯಿತೆ. ಸದಾ ಉತ್ಸಾಹ ಉಲ್ಲಾಸಗಳೆಂಬ ರೆಕ್ಕೆಗಳಿಂದ ಹಾರುವ ಕಲೆಯ ಕಡೆ ಹೋಗಿರಿ. ನಿಲ್ಲುವ ಕಲೆಯಲ್ಲಿ ಬರಬೇಡಿರಿ. ಬೀಳುವಕಲೆ, ನಿಲ್ಲುವಕಲೆ ಬೇಡ. ಸದಾ ಹಾರುವ ಕಲೆಯಲ್ಲಿ ಇರಬೇಕು ಟೀಚರ್ಸ್ ಎಲ್ಲರೂ ಯಾವ ಕಲೆಯಲ್ಲಿರುವವರು, ಟೀಚರ್ಸ್ ಎಂದರೆ ಸೇವೆಗೆ ನಿಮಿತ್ತರು ಸ್ವಸೇವೆಯಾದರೂ, ವಿಶ್ವ ಸೇವೆಯಾದರೂ ಆಗಲಿ, ಸದಾ ಸೇವೆಯಲ್ಲಿ ತತ್ಪರರಾಗಿ ಇರಬೇಕು. ಇದೇ ಟೀಚರ್ಸ್ ನ ವಿಶೇಷತೆ. ಮನಸ್ಸು, ಬುದ್ಧಿ ಮತ್ತು ಶರೀರದಿಂದ ಸ್ವಯಂ ಅನ್ನು ಬ್ಯುಜೀಯಾಗಿ ಇಡುವವರು. ಬುದ್ಧಿಯನ್ನು ಖಾಲಿಯಾಗಿ ಉಸಿಕೊಳ್ಳುವುದು ಅರ್ಥಾಥ್ ಮಾಯೆಯನ್ನು ಆಹ್ವಾನಿಸುವುದು. ಆಹ್ವಾನ ಪಡೆದವರು ತಪ್ಪದೆ ಬಂದು ಕುಳಿತುಕೊಳ್ಳುತ್ತಾರೆ ತಾನೆ! ಆನಂತರ ಮತ್ತೆ ಮಾಯೆಯನ್ನು ಹಿಮ್ಮೆಟ್ಟಬೇಕೆಂದು ತಂದೆಗೆ ಹೇಳುತ್ತಿದ್ದೀರಿ. ಕರೆಯುವುದು ನೀವು ಕಳುಹಿಸುವುದು ಬಾಪ್‌ದಾದಾರವರೇ. ಟೀಚರ್ಸ್ ಅಥವಾ ನಂಬರ್ ಒನ್ ಈಶ್ವರೀಯ ವಿದ್ಯಾರ್ಥಿಯ ವಿಶೇಷತೆ ಏನೆಂದರೆ ಮನಸ್ಸು, ಬುದ್ಧಿ ಮತ್ತು ಶರೀರದಿಂದ ತಮ್ಮನ್ನು ತಾವು ಬಿಜಿಯಾಗಿ ಇಟ್ಟುಕೊಳ್ಳುತ್ತಾರೆ ವಿಶೇಷವಾಗಿ ನಿಮಿತ್ತವಾದ ಸೇವಾದಾರರು ಈ ವಿಷಯವನ್ನು ಅಂಡರ್ ಲೈನ್ ಮಾಡಿಕೊಂಡರೆ ಸಹಜವಾಗಿ ಆಯಾಸ ಇರದವರಂತೆ ತಯಾರಾಗುತ್ತೀರಿ. ಒಳ್ಳೆಯದು.

ಇಂದು ಪೂರ್ಣ ಕುಂಭಮೇಳ ಭಾರತವಾಸಿಯರಿಗೆ 3 ಹೆಜ್ಜೆಗಳಷ್ಟು ಸ್ಥಳ ಬೇಕು ಮತ್ತು ಡಬಲ್ ವಿದೇಶಿಯರಿಗೆ ಡಬಲ್ ಬೇಕು. ಮೂರು ಹೆಜ್ಜೆಗಳ ಸ್ಥಳ ಲಗೇಜಿನ ಸಲುವಾಗಿ ಇನ್ನೂ ಮೂರು ಹೆಜ್ಜೆಯ ಸ್ಥಳ ಸ್ವಯಂಗಾಗಿ ಎಲ್ಲಾ ಭವನಗಳಲ್ಲಿ 1600 ಜನ ಭಾರತ ವಾಸಿಯರು ಇದ್ದಾರೆ. 1125 ಜನ ವಿದೇಶಿಯರು ಇದ್ದಾರೆ ಇವರಿಗೆ ಮೂರು ಹೆಜ್ಜೆಗಳ ಸ್ಥಳ ಬೇಕು ಒಳ್ಳೆಯದು.

**ನಾಲ್ಕಾರು ಕಡೆಯ ಸದಾ ಉಮ್ಮಂಗ-ಉತ್ಸಾಹದಲ್ಲಿ ಹಾರುವಂತಹ ತೀವ್ರ ಪುರುಷಾರ್ಥಿ ಆತ್ಮರಿಗೆ, ಸದಾ ತಂದೆಯ ಹೃದಯದಲ್ಲಿ ಇರುವಂತಹ ವಿಶೇಷ ಮಣಿಗಳಿಗೆ, ಸದಾ ತಂದೆ ಮತ್ತು ನಾನು- ಈ ಸ್ಮೃತಿಯ ಛತ್ರಛಾಯೆಯಲ್ಲಿ ಇರುವಂತಹ, ಸದಾ ನಿಲ್ಲುವ ಕಲೆ-ಇಳಿಯುವ ಕಲೆಯಿಂದ ಪಾರಾಗಿ ಹಾರುವ ಕಲೆಯಲ್ಲಿ ಮುಂದುವರೆಯುವಂತಹ, ಸದಾ ತನ್ನನ್ನು ವಿಭಿನ್ನ ಮಾತುಗಳಿಂದ ಖುಷಿ ಮತ್ತು ನಶೆಯಲ್ಲಿ ಮುಂದುವರೆಸಿಕೊಳ್ಳುವಂತಹ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 19-03-1990.

***ಹಾರುವ ಕಲೆಗೆ ಆಧಾರ ಉತ್ಸಾಹ-ಉಲ್ಲಾಸದ ರೆಕ್ಕೆಗಳು.***

ಉತ್ಸಾಹ-ಉಲ್ಲಾಸದ ರೆಕ್ಕೆಗಳು ಹಾರುವ ಕಲೆಯ ಕಡೆ ಕರೆದುಕೊಂಡು ಹೋಗುತ್ತವೆ. ಜ್ಞಾನಯೋಗಗಳೆಂಬ ಹಾರುವ ಕಲೆಯ ರೆಕ್ಕೆಗಳಂತೂ ಇದ್ದೆ ಇವೆ. ಆದರೆ ಪ್ರತ್ಯಕ್ಷ ಸ್ವರೂಪದಲ್ಲಿ ಇಡೀ ದಿನಚರಿಯಲ್ಲಿ ಪ್ರತೀ ಸಮಯ, ಪ್ರತೀ ಕರ್ಮದಲ್ಲಿ, ಪ್ರತಿದಿನ ಹೊಸ ಉತ್ಸಾಹ-ಉಲ್ಲಾಸವು ಸ್ವತಹ ಉತ್ಪನ್ನವಾಗುತ್ತದೆ. ಎಲ್ಲಿ ಉತ್ಸಾಹ-ಉಲ್ಲಾಸವಿರುವುದು ಅದೇ ಹಾರುವ ಕಲೆಯ ಆಧಾರವಾಗುತ್ತದೆ.

ಎಂತಹದೇ ಕಾರ್ಯವಿರಲಿ ಸ್ವಚ್ಛ ಮಾಡುವುದಿರಲಿ, ಪಾತ್ರೆ ತೊಳೆಯುವುದಿರಲಿ, ಸಾಧಾರಣ ಕರ್ಮವೇ ಆಗಿರಲಿ ಆದರೆ ಅದರಲ್ಲಿಯೂ ಉತ್ಸಾಹ-ಉಲ್ಲಾಸವು ಸ್ವಾಭಾವಿಕ ಹಾಗೂ ನಿರಂತರವಾಗಿ ಇರಬೇಕು. ಕೇವಲ ಅಭ್ಯಾಸ ಮಾಡುತ್ತಿರುವಾಗ, ಓದುತ್ತಿರುವಾಗ, ಸ್ಮೃತಿಯಲ್ಲಿ ಕುಳಿತುಕೊಳ್ಳಬೇಕಾದರೆ ಅಥವಾ ಇತರರಿಗೆ ಯೋಗ ಮಾಡಿಸಬೇಕಾದಾಗ ಅಥವಾ ಆಧ್ಯಾತ್ಮಿಕ ಸೇವೆಯಲ್ಲಿ ನಿರತರಾಗಿದ್ದಾಗ ಉತ್ಸಾಹ-ಉಲ್ಲಾಸಗಳಿದ್ದು ಸಾಧಾರಣ ಕರ್ಮದಲ್ಲಿ ಇರದಿದ್ದರೆ ಅದನ್ನು ಹಾರುವ ಕಲೆಯ ಚಿಹ್ನೆ ಎಂದು ಹೇಳಲಾಗುವುದಿಲ್ಲ. ಹಾರುವ ಕಲೆಯ ಶ್ರೇಷ್ಠ ಆತ್ಮನ ಉತ್ಸಾಹ-ಉಲ್ಲಾಸದ ರೆಕ್ಕೆಗಳು ಸದಾ ಹಾರುತ್ತಾ ಇರುತ್ತವೆ. ಎಂದು ಹೇಳುತ್ತಾ ಶಿವಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂ

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಉತ್ಸಾಹ-ಉಲ್ಲಾಸಗಳಲ್ಲಿ ಹಾರುತ್ತಾ ಪ್ರತೀ ಸಮಯ, ಪ್ರತೀ ಸಾಧಾರಣ ಕರ್ಮದಲ್ಲಿಯೂ ಹಾರುವ ಕಲೆಯನ್ನು ಅನುಭವ ಮಾಡಿಕೊಂಡಿದ್ದೇನೆ.

2. ನಾನು ತಂದೆಯ ಮೇಲಿನ ಪ್ರೀತಿಯಿಂದ ಸರ್ವ ಅಡಚಣೆ(ವಿಘ್ನ)ಗಳನ್ನು ಪಾರುಮಾಡಿದ್ದೇನೆ.

3. ನಾನು ಪ್ರತಿದಿನ ವಿಭಿನ್ನ ಪಾಯಿಂಟ್ಸ್ ಗಳನ್ನು ಅನುಭವ ಮಾಡಿಕೊಂಡು ಸದಾ ಉತ್ಸಾಹ ಉಲ್ಲಾಸವೆಂಬ ರೆಕ್ಕೆಯಿಂದ ಹಾರುತ್ತಾ ಇದ್ದೇನೆ.

4. ನಾನು ಸರ್ವ ಸಂಬಂಧಗಳಿಂದ ತಂದೆಯನ್ನು ನನ್ನವರನ್ನಾಗಿ ಮಾಡಿಕೊಂಡು ತಂದೆಯ ಪ್ರಾಪ್ತಿಗಳು ತಂದೆಯ ಖಜಾನೆಗಳನ್ನು, ಒಂದೊಂದು ರತ್ನವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಂಡಿದ್ದೇನೆ.

5. "ತಂದೆ ಮತ್ತು ನಾನು" ಈ ರಕ್ಷಣೆಯ ರೇಖೆಯಲ್ಲಿ ಸದಾ ಇರುತ್ತಾ ಪರಮಾತ್ಮನ ಛತ್ರ ಛಾಯೆಯಲ್ಲಿ ನಾನು ಸುರಕ್ಷಿತವಾಗಿ ಇದ್ದೇನೆ.

6. ನಾನು ಸದಾ ತಂದೆಯ  ಹೃದಯದಲ್ಲಿರುವ ಮಾಯಾಜಿತ್ ಸ್ವರೂಪ.

7. ನಾನು ಕೊನೆಯಲ್ಲಿ ಬಂದರೂ ತೀವ್ರವಾಗಿ ಮುಂದಕ್ಕೆ ಹೋಗುವ ಮೊದಲ ನಂಬರ್ ವಿದ್ಯಾರ್ಥಿ.

8. ನಾನು ಸದಾ ತಂದೆಯ ಛತ್ರ ಛಾಯೆಯಲ್ಲಿ, ತಂದೆ ಹೃದಯದಲ್ಲಿ ಇರುತ್ತಾ ತೀವ್ರಗತಿಯಿಂದ ಮುಂದಕ್ಕೆ ಹೋಗಿದ್ದೇನೆ.

9. ನಾನು ಬುದ್ಧಿಯಿಂದ ಸೇವೆಯನ್ನು ತಂದೆಗೆ ಅರ್ಪಣೆ ಮಾಡಿ ಸಫಲತೆಯನ್ನು ಪಡೆದಿದ್ದೇನೆ.

10. ನಾನು ಮನಸ್ಸು ಬುದ್ಧಿ, ಶರೀರವನ್ನು ಬಿಜಿಯಾಗಿ ಇಟ್ಟು ಕೊಂಡಿರುವ ನಂಬರ್ ಒನ್ ವಿದ್ಯಾರ್ಥಿ.